1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.103/2017

ದಿಃ 27.07.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-34 Pw-24

ಹೆಸರು : ರವಿ ಬಿ
ತಂದೆಯ ಹೆಸರು : ಎ ಬೆಟ್ಟಯ್ಯ
ವಯಸ್ಸು : 49 ವರ್ಷ
ಉದ್ಯೋಗ : ಪೊಲೀಸ್ ನಿರೀಕ್ಷಕರು,
ಪೊಲೀಸ್ ಪ್ರಧಾನ ಕಚೇರಿ,
ಬೆಂಗಳೂರು
ವಾಸಸ್ಥಳ : ಬೆಂಗಳೂರು

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಸನ್ 2016ರ ಜೂನ್ ಮಾಹೆಯಿಂದ ಸನ್ 2017ರ ಜುಲೈ ಮಾಹೆಯವರೆಗೆ ನಾನು ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆನು.

2. ದಿಃ11.10.2016ರಂದು ರಾತ್ರಿ ಸುಮಾರು 9.45ರ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ.1 ಈತನು ನನ್ನ ಮುಂದೆ ಹಾಜರಾಗಿ ಒಂದು ಲಿಖಿತ ಪಿರ್ಯಾದನ್ನು ಸಲ್ಲಿಸಿದರ ಆಧಾರದ ಮೇರೆಗೆ ನಾನು ನಮ್ಮ ಠಾಣಾ ಪ್ರಕರಣ ಸಂಖ್ಯೆ.362/2016ನ್ನು ದಾಖಲಿಸಿಕೊಂಡು, ಅದರ ಮೂಲ ಪಿರ್ಯಾದು ಮತ್ತು

ಪ್ರ.ವ.ವ.ಗಳನ್ನು ನ್ಯಾಯಾಲಯಕ್ಕೆ ಕಳುಹಿಸಿ, ಅವುಗಳ ಪ್ರತಿಗಳನ್ನು ನಮ್ಮ ಮೇಲಧಿಕಾರಿಗಳಿಗೆ ಮಾಹಿತಿಗೋಸ್ಕರ ರವಾನಿಸಿರುತ್ತೇನೆ.

3. ಸದರಿ ಮೂಲ ಪಿರ್ಯಾದನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ನನ್ನ ಸಹಿಯನ್ನು ಈಗ ನಿ.ಪಿ.1(ಬಿ) ಎಂದು ಗುರುತಿಸಲಾಯಿತು.

4. ಮೂಲ ಪ್ರ.ವ.ವ.ಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ, ಅದನ್ನು ನಿ.ಪಿ.30 ಎಂದು, ಮತ್ತು ಅದರ ಮೇಲಿರುವ ನನ್ನ ಸಹಿಯನ್ನು ನಿ.ಪಿ.30(ಎ) ಎಂದು ಗುರುತಿಸಲಾಯಿತು.

5. ತದನಂತರ, ಮುಂದಿನ ತನಿಖೆಗೆಂದು ಪ್ರಕರಣದ ಕಡತವನ್ನು ಚಾಸಾ.35 ಇವರಿಗೆ ಹಸ್ತಾಂತರಿಸಿರುತ್ತೇನೆ.

6. ದಿಃ17.10.2016ರಂದು ಸದರಿ ಚಾಸಾ.35 ಇವರು ನನಗೆ, ಚಾಸಾ.29, 30, ಮತ್ತು 32 ಇವರಿಗೆ ಆರೋಪಿತರನ್ನು ತಲಾಶೆ ಮಾಡಲೆಂದು ಕರೆದುಕೊಂಡು ಬೆಂಗಳೂರಿನ ವಿವಿಧ ಜಾಗಗಳಿಗೆ ಭೇಟಿ ನೀಡಿದ್ದು, ಅಲ್ಲಿ ಯಾವುದೇ ಆರೋಪಿಗಳ ಸುಳಿವು ಸಿಗದೇ ಇದ್ದುದ್ದರಿಂದ, ನಂತರ ಖಚಿತ ಮಾಹಿತಿ ಮೇರೆಗೆ ನಾಗರಬಾವಿಯ

ಬಿಡಿಎ ಕಾಂಪ್ಲೆಕ್ಸ್ ಹತ್ತಿರ ಹೋಗಿ ಆರೋಪಿ ನಂಬರ್.1ರಿಂದ 4, 6, 8, 10 ಮತ್ತು 11 ಇವರನ್ನು ಹಿಡಿದು ಚಾಸಾ.35 ಇವರ ಕಚೇರಿಗೆ ರಾತ್ರಿ ಸುಮಾರು 9.00 ಗಂಟೆ ಸಮಯದಲ್ಲಿ ಕರೆತಂದಿರುತ್ತೇವೆ.

7. ಆ ಕುರಿತು ಅದೇ ದಿನ ಚಾಸಾ.35 ಇವರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

8. ಈದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರ ಪೈಕಿ, ಆದಿನ ನಾವು ಹಿಡಿದಿದ್ದ ಆರೋಪಿ ನಂಬರ್.1, 2, 4, 6 ಮತ್ತು 10 ಇವರನ್ನು ನೋಡಿ ಗುರುತಿಸುತ್ತಿದ್ದೇನೆ.

<u>ಪಾಟೀ ಸವಾಲುಃ ಶ್ರೀ. ಆರ್.ಕೆ.ಎಸ್., ವಕೀಲರಿಂದ ಆರೋಪಿಗಳ ಪರವಾಗಿಃ</u>

9. ಪಿರ್ಯಾದನ್ನು ಸಲ್ಲಿಸಲು 4 ಗಂಟೆಗಳ ಕಾಲ ವಿಳಂಬವಾಗಿರುತ್ತದೆ ಎಂದರೆ, ಪಿರ್ಯಾದನ್ನು ತಂದುಕೊಟ್ಟ ಮೇಲೆ ಅದನ್ನು ತಕ್ಷಣ ದಾಖಲಿಸಿಕೊಂಡಿರುತ್ತೇನೆ ಎಂದು ಹೇಳುತ್ತೇನೆ.

10. ಪಿರ್ಯಾದನ್ನು ದಾಖಲಿಸುವುದಕ್ಕಿಂತ ಮುಂಚೆ ಘಟನೆಯ ಕುರಿತು ಮುಂಚಿತವಾಗಿ ನನಗೆ ಯಾವುದೇ ಮಾಹಿತಿ ಬಂದಿರಲಿಲ್ಲ.

11. ಸದರಿ ಪ್ರಕರಣವನ್ನು ಮೂಲತಃ ಅನಾಮಿಕ ವ್ಯಕ್ತಿಗಳ ಮೇಲೆ ದಾಖಲಿಸಿಕೊಂಡಿದ್ದು ಇರುತ್ತದೆ ಎನ್ನುವುದು ಸರಿ.

12. ನಿ.ಪಿ.1ರಲ್ಲಿ ಯಾವುದೇ ವ್ಯಕ್ತಿಯ ಗುರುತು, ಚಹರಾಪಟ್ಟಿಗಳನ್ನು ನಮೂದಿಸಿರುವುದಿಲ್ಲ ಎನ್ನುವುದು ಸರಿ.

13. ದಿಃ17.10.2016ರಂದು ನಾವು ಠಾಣೆ ಬಿಟ್ಟಾಗ ಬೆಳಿಗ್ಗೆ ಸುಮಾರು 10.30-10.45 ಗಂಟೆ ಆಗಿತ್ತು.

14. ನಾವು ಸರ್ಕಾರಿ ಜೀಪಿನಲ್ಲಿ ಹೋಗಿದ್ದು, ಅದರ ನಂಬರ್ ನೆನಪಿಲ್ಲ.

15. ನಾಗರಬಾವಿಯ ಬಿಡಿಎ ಕಾಂಪ್ಲೆಕ್ಸ್ ಹತ್ತಿರ ನಾವು ಹೋದ ಜಾಗ ಜನಬಿಡದಿಂದ ಕೂಡಿದ್ದು, 24 ಗಂಟೆಗಳ ಕಾಲ ಜನರ ಮತ್ತು ವಾಹನಗಳ ಸಂದಣಿಯಿಂದ ಕೂಡಿರುತ್ತದೆ ಎಂದರೆ, ರಾತ್ರಿ ಹೊತ್ತಿನಲ್ಲಿ ಜನಸಂದಣಿ ಇರುವುದಿಲ್ಲ ಎಂದು ಹೇಳುತ್ತೇನೆ.

16. ಸದರಿ ಜಾಗದಲ್ಲಿ ಸಾಕಷ್ಟು ಅಂಗಡಿ-ಮುಂಗಟ್ಟುಗಳು ಮತ್ತು ಬಸ್ ಸ್ಟಾಪ್ ಇರುತ್ತದೆ ಎನ್ನುವುದು ಸರಿ.

17. ಜನದಟ್ಟಣೆಯಲ್ಲಿ ಯಾವುದೇ ವ್ಯಕ್ತಿಯನ್ನು ಅಷ್ಟು ಸಲೀಸಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ ಎಂದರೆ, ಅವರ ಗುರುತು ಇದ್ದರೆ ತಕ್ಷಣ ಅವರನ್ನು ಗುರುತಿಸಬಹುದು ಎಂದು ಹೇಳುತ್ತೇನೆ.

18. ಆದಿನ ಆರೋಪಿತರನ್ನು ತಲಾಶೆ ಮಾಡಲು ಹೋಗುವುದಕ್ಕಿಂತ ಮುಂಚೆ ಸದರಿ ಆರೋಪಿತರ ಫೋಟೋಗಳನ್ನು ನೋಡಿದ್ದೆನು.

19. ನಾವು ಎಲ್ಲಾ ಸಿಬ್ಬಂದಿ ಸೇರಿ ಸದರಿ ಎಲ್ಲಾ 8 ಜನ ಆರೋಪಿತರನ್ನು ಹಿಡಿದಿರುತ್ತೇವೆ.

20. ಆದಿನ ನಾವು ಹಿಡಿದ ಯಾವ್ಯಾವ ಆರೋಪಿ ಯಾವ್ಯಾವ ಬಣ್ಣದ ಮತ್ತು ತರಹದ ಬಟ್ಟೆಗಳನ್ನು ಧರಿಸಿದ್ದರು ಎಂದು ಈಗ ನನಗೆ ನೆನಪಿಲ್ಲ.

21. ಆದಿನ ನಾವು ಆರೋಪಿತರನ್ನು ಹಿಡಿದ ಸ್ಥಳದ ಚಕ್ಕುಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ.

22. ದಿಃ11.10.2016 ರಂದು ರಾತ್ರಿ ಸುಮಾರು 9.45 ರ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ.1 ಈತನು ನನ್ನ ಮುಂದೆ ಹಾಜರಾಗಿ ಒಂದು ಲಿಖಿತ ಪಿರ್ಯಾದನ್ನು ಸಲ್ಲಿಸಿದರ ಆಧಾರದ ಮೇರೆಗೆ ನಾನು ನಮ್ಮ ಠಾಣಾ ಪ್ರಕರಣ ಸಂಖ್ಯೆ.362/2016 ನ್ನು ದಾಖಲಿಸಿಕೊಂಡು, ಅದರ ಮೂಲ ಪಿರ್ಯಾದು ಮತ್ತು ಪ್ರ.ವ.ವ.ಗಳನ್ನು ನ್ಯಾಯಾಲಯಕ್ಕೆ ಕಳುಹಿಸಿ, ಅವುಗಳ ಪ್ರತಿಗಳನ್ನು

ನಮ್ಮ ಮೇಲಧಿಕಾರಿಗಳಿಗೆ ಮಾಹಿತಿಗೋಸ್ಕರ ರವಾನಿಸಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

23. ತದನಂತರ, ಮುಂದಿನ ತನಿಖೆಗೆಂದು ಪ್ರಕರಣದ ಕಡತವನ್ನು ಚಾಸಾ.35 ಇವರಿಗೆ ಹಸ್ತಾಂತರಿಸಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

24. ದಿಃ17.10.2016 ರಂದು ಸದರಿ ಚಾಸಾ.35 ಇವರು ನನಗೆ, ಚಾಸಾ.29, 30, ಮತ್ತು 32 ಇವರಿಗೆ ಆರೋಪಿತರನ್ನು ತಲಾಶೆ ಮಾಡಲೆಂದು ಕರೆದುಕೊಂಡು ಬೆಂಗಳೂರಿನ ವಿವಿಧ ಜಾಗಗಳಿಗೆ ಭೇಟಿ ನೀಡಿದ್ದು, ಅಲ್ಲಿ ಯಾವುದೇ ಆರೋಪಿಗಳ ಸುಳಿವು ಸಿಗದೇ ಇದ್ದುದ್ದರಿಂದ, ನಂತರ ಖಚಿತ ಮಾಹಿತಿ ಮೇರೆಗೆ ನಾಗರಬಾವಿಯ ಬಿಡಿಎ ಕಾಂಪ್ಲೆಕ್ಸ್ ಹತ್ತಿರ ಹೋಗಿ ಆರೋಪಿ ನಂಬರ್.1 ರಿಂದ 4, 6, 8, 10 ಮತ್ತು 11 ಇವರನ್ನು ಹಿಡಿದು ಚಾಸಾ.35 ಇವರ ಕಚೇರಿಗೆ ರಾತ್ರಿ ಸುಮಾರು 9.00 ಗಂಟೆ ಸಮಯದಲ್ಲಿ ಕರೆತಂದಿರುತ್ತೇವೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

25. ಆ ಕುರಿತು ಅದೇ ದಿನ ಚಾಸಾ.35 ಇವರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

26. ಈದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರ ಪೈಕಿ, ಆದಿನ ನಾವು ಹಿಡಿದಿದ್ದ ಆರೋಪಿ ನಂಬರ್.1, 2, 4, 6 ಮತ್ತು 10 ಇವರನ್ನು ನೋಡಿ ಗುರುತಿಸುತ್ತಿದ್ದೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.